**SPL.C. 5136/2024**
ಚಾ.ಸಾ **:4** ಪ್ರಾ.ಸಾ **:4**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಕಾವೇರಿ |
| ತಂದೆ ಹೆಸರು | : | ಬಸವರಾಜ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಈ.ಜೆ.ಉದ್ಬಾಳ |

ಸಾಕ್ಷಿಗೆ ದಿನಾಂಕ **26-11-2025** ರಂದು ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>

ನಾನು ಚಲುವಾದಿ ಜಾತಿಗೆ ಸೇರಿರುತ್ತೇನೆ. ಅದು ಬ್ಯಾಗಾರ ಜಾತಿಯಲ್ಲಿ ಬರುತ್ತದೆ. ಈ ಕೇಸಿನ ಎಲ್ಲಾ ಆರೋಪಿತರು ಕುರುಬ ಜನಾಂಗಕ್ಕೆ ಸೇರಿದ್ದಾರೆ.

2. ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 09-00 ಗಂಟೆಗೆ ನಾನು ಮನೆಯಲ್ಲಿದ್ದಾಗ, ಜಗಳಾಡುವ ಶಬ್ದ ಕೇಳಿತ್ತು. ಕಾರಣ ನಾನು, ಚಾ.ಸಾ3 ಮತ್ತು 5 ಸೇರಿಕೊಂಡು ಜಗಳ ನಡೆಯುತ್ತಿದ್ದ ಗೋಡ್ವಾನ್ ಕಟ್ಟುತ್ತಿದ್ದ ಸ್ಥಳಕ್ಕೆ ಹೋಗಿದ್ದೇವು.

3. ಅಲ್ಲಿ 20 ಜನರಲ್ಲಿ ಕೆಲವರು ಚಾ.ಸಾ1 ಮತ್ತು 2 ಇವರನ್ನು ಕಟ್ಟಿಗೆಗಳಿಂದ ಬಡಿಯುತ್ತಿದ್ದರು. ನಾವು ಬಿಡಿಸಲು ಹೋಗುತ್ತಿದ್ದಾಗ, 9 ಮತ್ತು 16 ನೇ ಆರೋಪಿತರು ನನಗೆ ಬ್ಯಾಗಾರ ಸೂಳೆಯರು ಬಂದಿದ್ದಾರೆ ಎಂದು ಬೈದಿರುತ್ತಾರೆ.

4. ಆರೋಪಿ ಸಂ. 16 ಈತನು ನನ್ನನ್ನು ಕೈಯಿಂದ ಬಡಿದಿರುತ್ತಾನೆ. 9 ನೇ ಆರೋಪಿ ನನ್ನ ಸೆರಗನ್ನು ಎಳೆಯಲು ಬಂದಿದ್ದನು.

5. ಆರೋಪಿತರಲ್ಲಿ ಕೆಲವೊಬ್ಬರು ಚಾ.ಸಾ5 ಮತ್ತು 3 ಇವರನ್ನುಬಡಿದಿರುತ್ತಾರೆ. ಅವರು ಯಾರು ಎಂಬುದನ್ನು ಗುರುತಿಸಲು ಆಗಿಲ್ಲ. ನನ್ನ ಗಂಡ ಚಾ.ಸಾ3 ಈತನನ್ನು ಕಟ್ಟಿಗೆಯಿಂದ ಬಡಿದಿರುತ್ತಾರೆ.

6. ಅ ಸ್ಥಳಕ್ಕೆ ಹುಲ್ಲೇಶ, ಆನಂದ, ಇನ್ನೊಬ್ಬ ಸೇರಿಕೊಂಡು ಜಗಳ ಬಿಡಿಸಿದ್ದಾರೆ. ನಾವೆಲ್ಲರೂ ಕಂಪ್ಲೇಂಟ್ ಮಾಡಲು ಠಾಣೆಗೆ ಹೋಗಿದ್ದೇವು. ಪೊಲೀಸರು ಆಸ್ಪತ್ರೆಯಲ್ಲಿ ದಾಖಲಾಗಲು ಕಳಿಸಿದ್ದರು. ನಾವು ಆಸ್ಪತ್ರೆಯಲ್ಲಿ ದಾಖಲಾಗಿದ್ದೇವು. ಈ ಎಲ್ಲಾ ವಿಷಯಗಳನ್ನು ಪೊಲೀಸರಿಗೆ ನಾನು ಹೇಳಿದ್ದೇನೆ.

7. ಮುದ್ದೆಮಾಲು 1 ರಿಂದ 4 ರಲ್ಲಿರುವ ಕಟ್ಟಿಗೆ ಮತ್ತು ಕಲ್ಲುಗಳಿಂದ ಆರೋಪಿತರು ನಮ್ಮನ್ನು ಬಡಿದಿರುತ್ತಾರೆ.

<u>ಪಾಟೀ ಸವಾಲು**: 1** ರಿಂದ **20** ನೇ ಆರೋಪಿ ಪರ ವಕೀಲರಿಂದ**:**</u>

ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಸಮಯ ಕೋರಿದ್ದಾರೆ. ಯಾವುದೇ ಸಕಾರಣ ಇಲ್ಲದೆ ಇರುವುದರಿಂದ ಅವರ ವಿನಂತಿಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ರಾಯಚೂರು ಪೀಠ ಸಿಂಧನೂರು